ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೭ (೨೧೬೦)

ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)

ಉತ್ತರಿಸುವವರು : ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ಚಾಮರಾಜನಗರ ತಾಲ್ಲೂಕಿನ ಇರಸವಾಡಿ, ಸುತ್ತೂರು ಹಾಗೂ ಇನ್ನಿತರ ಹಳ್ಳಿಗಳಲ್ಲಿ ದಲಿತ ರೈತರಿಗೆ ಸರ್ಕಾರ ಮಂಜೂರು ಮಾಡಿರುವ ಭೂಮಿಯನ್ನು ಅರಣ್ಯ ಇಲಾಖೆ ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ರೀತಿಯ ಭೂಮಿಯನ್ನು ಅತಿಕ್ರಮಿಸಲು ಕಾರಣವೇನು ;

ಇ) ಭೂಮಿ, ಕಳೆದುಕೊಂಡಿರುವವರಿಗೆ ಪರಿಹಾರ ನೀಡಲು ಕೈಗೊಂಡ ಕ್ರಮಗಳೇನು ;

ಈ) ಅತಿಕ್ರಮಣ ಮಾಡಿರುವಂತಹ ದಲಿತ ವಿರೋಧಿ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ. ;

ಉ) ಈಗಲಾದರೂ ಅತಿಕ್ರಮಣವಾದ ಭೂಮಿ ಕಳೆದುಕೊಂಡವರಿಗೆ ಪರ್ಯಾಯವಾಗಿ ಭೂಮಿ ಅಥವಾ ಅರ್ಹ ಪರಿಹಾರ ಕೊಡಲು ಎಷ್ಟು ಸಮಯ ಬೇಕಾಗುತ್ತದೆ ?

ಉತ್ತರ

ಅ) ಚಾಮರಾಜನಗರ ತಾಲ್ಲೂಕಿನ ಇರಸವಾಡಿ, ಸುತ್ತೂರು ಹಳ್ಳಿಗಳ ದಲಿತ ರೈತರಿಗೆ ೨೦೪ ಎಕರೆ ಭೂಮಿಯನ್ನು ಯಳಂದೂರು ತಾಲ್ಲೂಕು ಸಂತೇಮರಳ್ಳಿ ಹೋಬಳಿಯ ತಿಮ್ಮೇಗೌಡನಪಾಳ್ಯ ಗ್ರಾಮದ ಸರ್ವೆ ನಂ : ೫೫ ರಲ್ಲಿ ಮಂಜೂರು ಮಾಡಲಾಗಿತ್ತು.

ಮಂಜೂರು ಮಾಡಲಾಗಿದ್ದ ಈ ಭೂಮಿಯನ್ನು ಸರ್ಕಾರವು ಅರಣ್ಯ ಕಾಯ್ದೆ ೧೯೬೩ ರ ಸೆಕ್ಷನ್ ೪ ಮತ್ತು ೧೭ ರಂತೆ ಅಧಿಸೂಚನೆ ಮಾಡಿರುವುದರಿಂದ ಹಾಲಿ ಅರಣ್ಯ ಇಲಾಖೆಯ ವಶದಲ್ಲಿದೆ.

ಆ) ಈ ಭೂಮಿಗಳನ್ನು ೧೯೯೧ ರಲ್ಲಿ ಅರಣ್ಯ ಕಾಯ್ದೆ ಸೆಕ್ಷನ್ ೪ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ, ೨೦೦೧ನೇ ಇಸವಿಯಲ್ಲಿ ಅರಣ್ಯ ಕಾಯ್ದೆ ಸೆಕ್ಷನ್ ೧೭ರ ಅಡಿಯಲ್ಲಿ ಅಂತಿಮ ಅಧಿಸೂಚನೆ ಗೊರಡಿಸಿ ಮೀಸಲು ಅರಣ್ಯವೆಂದು ಘೋಷಿಸಿರುವುದರಿಂದ ಈ ಎಲ್ಲಾ ೨೦೪ ಎಕರೆ ಅರಣ್ಯ ಪ್ರದೇಶವನ್ನು ವಶಕ್ಕೆ ಪಡೆದು ಸಂರಕ್ಷಿಸಿಕೊಂಡು ಬರಲಾಗುತ್ತಿದೆ.

ಇ) ಭೂಮಿ ಕಳೆದುಕೊಂಡವರು ಇಲ್ಲಿಯವರೆವಿಗೂ ಯಾವುದೇ ಪರಿಹಾರಕ್ಕೆ ಯಾವುದೇ ಮನವಿಯನ್ನು ಸಲ್ಲಿಸಿಲ್ಲ. ಈ ಭೂಮಿಯನ್ನು ಈಗಾಗಲೇ ಮೀಸಲು ಅರಣ್ಯವೆಂದು ಘೋಷಿಸಿಉರವುದರಿಂದ ಹಗೂ ಬಿ.ಆರ. ಟಿ. ವನ್ಯಧಾಮದ ಒಟ್ಟಾರೆ ಪ್ರದೇಶದ ಭಾಗದ ಪ್ರದೇಶವಾಗಿರುವುದರಿಂದ ಸದರಿ ಪ್ರದೇಶಗಳನ್ನು ಬಿಟ್ಟು ಕೊಡಲು ಅವಕಾಶವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಈ ವಿಷಯವನ್ನು ಪರಿಶೀಲಿಸಿದ ನಂತರ ಕ್ರಮ ಕೈಗೊಳ್ಳಲಾಗುವುದು.